ಅಗೋಚರ ವೈಕಲ್ಯಗಳು

ಅರ್ಪಿತಾ ಯಾದವ್

ನಿಮಗೆ 'ತಾರೆ ಜಮೀನ್ ಪರ್' ಚಿತ್ರ ನೋಡಿದ್ದು ನೆನಪಿದೆಯೇ? ಆ ಚಲನ ಚಿತ್ರವು ಕಲಿಕೆಯಲ್ಲಿ ಕಂಡುಬರುವ ವೈಕಲ್ಯಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಿತು. ಹಾಗೆಯೇ ಅದು ನನಗೆ ಏನನ್ನಾದರೂ ಮಾಡಬೇಕೆಂಬ ಸ್ಫೂರ್ತಿ ನೀಡಿತು. ಹಲವಾರು ವರ್ಷಗಳಿಂದ ವಿಶೇಷ ಶಿಕ್ಷಣ ಶಿಕ್ಷಕಿಯಾಗಿ ಕೆಲಸ ಮಾಡಿದ ನಾನು ನಿರ್ದಿಷ್ಟ ಕಲಿಕಾ ವೈಕಲ್ಯಗಳ (Specifc Learning Disabilities, SLD) ಬಗ್ಗೆ ಗಮನಹರಿಸಲು ನಿರ್ಧರಿಸಿದೆ. ಕಲಿಕೆಯಲ್ಲಿ ಅಶಕ್ತತೆ ಹೊಂದಿರುವ ಮಕ್ಕಳೊಂದಿಗೆ ಕೆಲಸ ಮಾಡಿದ ನಾನು, ಅಂತಹ ಮಕ್ಕಳನ್ನು ಸ್ವತಂತ್ರರಾಗಿ ಮಾಡಲು ಮತ್ತು ಅವರು ತಾವೇ 'ಖುದ್ದಾಗಿ ಬದುಕನ್ನು ಎದುರಿಸುವುದನ್ನು' ಕಲಿಯಲು ನೆರವು ನೀಡುವ ಕಾರ್ಯದಲ್ಲಿ ನನ್ನ ಅನುಭವವನ್ನು ಬಳಸಲು ಪ್ರಯತ್ನಿಸಿದೆ. ನಿರ್ದಿಷ್ಟವಾದ ಕಲಿಕಾ ವೈಕಲ್ಯಗಳು ಭಾವನಾತ್ಮಕ ತೊಂದರೆಗಳಲ್ಲ, ಬೌದ್ಧಿಕ ಅಶಕ್ತತೆಗಳಲ್ಲ ಅಥವಾ ಇಂದ್ರಿಯ ಸಂಬಂಧಿ ಸಂವೇದನಾಶೀಲತೆಯ (Sensory Impairments) ದೌರ್ಬಲ್ಯಗಳಲ್ಲ. ಅವು ಪೋಷಕರ ಅಸಮರ್ಪಕ ಪಾಲನೆ ಅಥವಾ ಶೈಕ್ಷಣಿಕ ಅವಕಾಶದ ಕೊರತೆಗಳಿಂದಾಗಲೀ ಉಂಟಾದವುಗಳಲ್ಲ. ಈಗ ನಾವು ನಿರ್ದಿಷ್ಟವಾದ ಕಲಿಕಾ ವೈಕಲ್ಯಗಳು ಮತ್ತು ಅವುಗಳಿಗೆ ಸಂಬಂಧಿಸಿದ ಕೆಲವು ಅಂಶಗಳು ಯಾವುವು ಎಂಬುದನ್ನು ಅರ್ಥಮಾಡಿಕೊಳ್ಳೋಣ.

- ಇದು ಒಬ್ಬ ವ್ಯಕ್ತಿಯ ಮೆದುಳಿನ ನರಜಾಲಗಳ ('Wired') ರಚನೆಯಲ್ಲಿ ಕಂಡುಬರುವ ವ್ಯತ್ಯಾಸದಿಂದ ಉಂಟಾಗುವ ಒಂದು ನರ ದೋಷ (Neurological disorder).
- ನಿರ್ದಿಷ್ಟವಾದ ಕಲಿಕಾ ವೈಕಲ್ಯಗಳನ್ನು ಹೊಂದಿರುವ ಮಕ್ಕಳು ಚುರುಕಾಗಿರುತ್ತಾರೆ ಅಥವಾ ತಮ್ಮ ಓರಗೆಯವರಿಗಿಂತ ಚುರುಕಾಗಿರುತ್ತಾರೆ. ಆದರೆ ಅವರಿಗೆ ಓದಲು, ಬರೆಯಲು, ಕಾಗುಣಿತ ಮತ್ತು ತರ್ಕ, ಜ್ಞಾಪಕಶಕ್ತಿ ಮತ್ತು / ಅಥವಾ ಮಾಹಿತಿ ಸಂಯೋಜನೆಯಲ್ಲಿ ತೊಂದರೆಯಿರುತ್ತದೆ. ಅವರು ತಾವಾಗಿಯೇ ಕಲಿಯಲು ಅಥವಾ ಅವರಿಗೆ ಸಾಂಪ್ರದಾಯಿಕ (ಔಪಚಾರಿಕ) ರೀತಿಯಲ್ಲಿ ಕಲಿಸಿದರೆ ಕಲಿಯಲು ಕಷ್ಟವಾಗುತ್ತದೆ.
- ನಿರ್ದಿಷ್ಟವಾದ ಕಲಿಕಾ ವೈಕಲ್ಯಗಳನ್ನು ಹೊಂದಿರುವ ಮಕ್ಕಳನ್ನು ಗುಣಪಡಿಸಲು ಅಥವಾ ಸರಿಪಡಿಸಲು ಸಾಧ್ಯವಿಲ್ಲ. ಆದರೂ ಸೂಕ್ತ ಸಮಯದಲ್ಲಿ ಮಧ್ಯಪ್ರವೇಶ ಮತ್ತು ಸರಿಯಾದ ಬೆಂಬಲದ ಮೂಲಕ ಈ ಮಕ್ಕಳು ಶಾಲೆಯಲ್ಲಿ ಚೆನ್ನಾಗಿ ಕಲಿಯಬಲ್ಲರು ಮತ್ತು ತಮ್ಮ ವೃತ್ತಿಜೀವನದಲ್ಲಿ ಯಶಸ್ವಿಯಾಗಿ ಮುಂದುವರಿಯಬಲ್ಲರು.

ಸ್ಥೂಲವಾಗಿ ಹೇಳುವುದಾದರೆ, ಈ ವೈಕಲ್ಯಗಳು ಒಂದು ಅಥವಾ ಹೆಚ್ಚು ಮೂಲ ಮಾನಸಿಕ ಪ್ರಕ್ರಿಯೆಗಳನ್ನು ಒಳಗೊಂಡಿವೆ:

1. ಆಲಿಸುವ (Auditory) ಮತ್ತು ನೋಡುವ ಗ್ರಹಿಕೆ (Visual perception) (ಒಳಹರಿವು)
2. ಅನುಕ್ರಮ ವಿಚಾರ, ಅಮೂರ್ತ ಗ್ರಹಿಕೆ ಮತ್ತು ಸಂಘಟನೆ (ಸಮಗ್ರೀಕರಣ)
3. ಕಾರ್ಯನಿರ್ವಹಣೆ, ಅಲ್ಪಾವಧಿ ಮತ್ತು ದೀರ್ಘಾವಧಿ ಸ್ಮರಣೆ (ಜ್ಞಾಪಕಶಕ್ತಿ)
4. ಅಭಿವ್ಯಕ್ತಿಸುವ ಭಾಷೆ (ಹೊರಹರಿವು) ಮತ್ತು
5. ಸೂಕ್ಷ್ಮ ಮತ್ತು ಸ್ಥೂಲ ಚಲನಾ ಕೌಶಲಗಳು (Fine and Gross motor skills)

ಗುಣಲಕ್ಷಣಗಳು

- ಓದುವಿಕೆಯ ಮಟ್ಟ
- ಓದಿದ ವಿಷಯದ ಗ್ರಹಿಕೆ ಮತ್ತು ಸ್ಮರಣೆಯಲ್ಲಿ ತೊಂದರೆ–ಯಾಗುವುದು.
- ಒಂದೇ ರೀತಿ ಕಾಣುವ, ಕೇಳುವ ಶಬ್ದ ಅಥವಾ ಪದಗಳನ್ನು ಅರಿಯುವಲ್ಲಿ ಗೊಂದಲವಾಗುವುದು
- ವಾಕ್ಯ ರಚಿಸಲು ಕಷ್ಟವಾಗುವುದು ಮತ್ತು ತೀವ್ರ ವ್ಯಾಕರಣ ದೋಷ
- ನಿಧಾನ ಬರವಣಿಗೆಯ ಮಟ್ಟ ಮತ್ತು ದೊಡ್ಡದಾಗಿ ಬರೆಯುವುದು
- ಪದೇಪದೇ ಕಾಗುಣಿತ ದೋಷಗಳು ಕಾಣಿಸಿಕೊಳ್ಳುವುದು
- ಆಲೋಚನಾ ಶಕ್ತಿ ಮತ್ತು ಅಮೂರ್ತ ಪರಿಕಲ್ಪನೆಗಳನ್ನು ಗ್ರಹಿಸುವಲ್ಲಿ ತೊಂದರೆಯಾಗುವುದು
- ಗಣಿತದ ನಿಯಮಗಳನ್ನು ನೆನಪಿಡುವುದಕ್ಕೆ ತೊಂದರೆಯಾಗುವುದು
- ಅಂಕಗಣಿತದ ಕಾರ್ಯ ವಿಧಾನಗಳನ್ನು ನೆನಪಿಟ್ಟುಕೊಳ್ಳಲು ಕಷ್ಟಪಡುವುದು
- ಒಂದು ಪಠ್ಯದಲ್ಲಿನ ಪ್ರಮುಖ ವಿಚಾರವನ್ನು ಮತ್ತು ಮುಖ್ಯಾಂಶಗಳನ್ನು ಗ್ರಹಿಸುವುದರಲ್ಲಿ ಕಷ್ಟವಾಗುವುದು
- ಅಕ್ಷರಗಳನ್ನು ಮತ್ತು ಗಣಿತ ಚಿಹ್ನೆಗಳನ್ನು ತಿರುಗು–ಮುರುಗಾಗಿ ಬರೆಯುವುದು
- ಟಿಪ್ಪಣಿ ಮತ್ತು ಸಾರಾಂಶ ಬರೆಯುವುದರಲ್ಲಿ ಹಿಂದೆ ಬೀಳುವುದು
- ಸೂಚನೆಗಳನ್ನು ಪಾಲಿಸುವಲ್ಲಿ ತೊಂದರೆಯಾಗುವುದು
- ದುರ್ಬಲ ಸಮಯ ನಿರ್ವಹಣೆ ಮತ್ತು ಸಂಯೋಜನೆ
- ಓದು ಪ್ರಾರಂಭಿಸಲು ಮತ್ತು ಮುಂದುವರೆಸಲು ಕಷ್ಟವಾಗುವುದು

- ನಿಗದಿತ ಸಮಯದೊಳಗೆ ಕೊಟ್ಟ ಕೆಲಸ ಮಾಡಲು ಅಥವಾ ನಿಗದಿತ ಜವಾಬ್ದಾರಿಗಳನ್ನು ಪೂರ್ಣಗೊಳಿಸಲು ಅಸಮರ್ಥರಾಗುವುದು.

ನಿರ್ದಿಷ್ಟ ಕಲಿಕಾ ವೈಕಲ್ಯತೆ ವಿಧಗಳು

ಶ್ರವಣೇಂದ್ರಿಯ ಸಂಸ್ಕರಣಾ ದೋಷ

ಶ್ರವಣೇಂದ್ರಿಯ ಸಂಸ್ಕರಣಾ ದೋಷ (Auditory Processing Disorder-APD) ಎಂಬುವುದು ಕಿವಿಯ ಮೂಲಕ ಹಾದುಹೋಗುವ ಶಬ್ದಗಳು ಮೆದುಳಿನಲ್ಲಿ ಸಂಸ್ಕರಣೆಗೊಳ್ಳುವ ಕ್ರಿಯೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಒಂದು ಪರಿಸ್ಥಿತಿ. ಈ ಶ್ರವಣೇಂದ್ರಿಯ ಸಂಸ್ಕರಣಾ ದೋಷ ಹೊಂದಿರುವ ವ್ಯಕ್ತಿಗಳು ಜೋರಾಗಿ ಹೇಳಿದರೂ, ಸ್ಪಷ್ಟವಾಗಿ ಕೇಳಿಸುವಂತಿದ್ದರೂ ಪದಗಳ ಅಥವಾ ಶಬ್ದಗಳ ನಡುವಿನ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಲು ವಿಫಲರಾಗುತ್ತಾರೆ. ಅವರಿಗೆ ಶಬ್ದಗಳು ಎಲ್ಲಿಂದ ಬರುತ್ತಿವೆ ಎಂದು ಹೇಳಲು, ಶಬ್ದಗಳ ಕ್ರಮವನ್ನು ಅರ್ಥಮಾಡಿಕೊಳ್ಳಲು ಕಷ್ಟಕರ–ವಾಗುತ್ತದೆ. ಹಿನ್ನೆಲೆಯ ಶಬ್ದಗಳನ್ನು ಅರ್ಥ ಮಾಡಿಕೊಳ್ಳಲು ಕೂಡ ಆಗುವುದಿಲ್ಲ. ಉದಾಹರಣೆಗೆ, ಒಂದು ಮಗು ನಿಶ್ಯಬ್ದ ಸ್ಥಳದಲ್ಲಿ ತಾನೇ ಓದಬಹುದು. ಆದರೆ ಒಂದು ಸೂಚನೆಯನ್ನು ಪಾಲಿಸಲು, ಶಾಲೆಯಲ್ಲಿ ಪಾಠವನ್ನು ಅರ್ಥಮಾಡಿಕೊಳ್ಳಲು ಕೂಡ ಕಷ್ಟಪಡುವುದು.

ಶ್ರವಣೇಂದ್ರಿಯ ಸಂಸ್ಕರಣಾ ದೋಷದ ವಿಧಗಳು

- 'ಆಡಿಟರಿ ಫಿಗರ್ ಗ್ರೌಂಡ್' ಅಂದರೆ ಹಿನ್ನೆಲೆಯಲ್ಲಿ ಯಾವುದೇ ಶಬ್ದವಿದ್ದರೆ ಅದರತ್ತ ಗಮನಹರಿಸಲು ಮಗುವಿಗೆ ಸಾಧ್ಯವಾಗದ ಸ್ಥಿತಿ. ಗಲಾಟೆಯಿರುವ, ಗಜಿಬಿಜಿಯಿರುವ ತರಗತಿ ಕೊಠಡಿಗಳಲ್ಲಿ ಕಲಿಯುವುದಕ್ಕೆ ಬಹಳ ಕಷ್ಟಪಡುವುದು. ಈ ಪರಿಸ್ಥಿತಿಯಿಂದ ಅಂತಹ ಮಕ್ಕಳಿಗೆ ಬಹಳ ನಿರಾಶೆಯುಂಟಾಗುವುದು.
- ಆಡಿಟರಿ ಮೆಮೊರಿ ಅಥವಾ ಶ್ರವಣೇಂದ್ರಿಯ ಸ್ಮರಣೆ: ಸೂಚನೆಗಳು, ಪಟ್ಟಿಗಳು ಅಥವಾ ಓದುವ ಸಾಮಗ್ರಿಗಳು (ಪಠ್ಯಪುಸ್ತಕಗಳು) ಮುಂತಾದ ಮಾಹಿತಿಗಳನ್ನು ನೆನಪಿಟ್ಟುಕೊಳ್ಳುವಲ್ಲಿ ತೊಂದರೆ. ಅದು ತಕ್ಷಣದ್ದಾಗಿರ–ಬಹುದು (ನನಗೆ ಈಗ ನೆನಪಿಲ್ಲ) ಅಥವಾ ಅನಂತರದ್ದಿರ–ಬಹುದು (ಆನಂತರ ನನಗೆ ನೆನಪಿರುವುದಿಲ್ಲ).
- ಶ್ರವಣೇಂದ್ರಿಯ ವಿವೇಚನೆ (Auditory discrimination): ಕೇಳಿಸಿಕೊಳ್ಳಲು ಒಂದೇ ರೀತಿ ಇರುವ ಪದಗಳು ಅಥವಾ ಶಬ್ದಗಳ ನಡುವಿನ ವ್ಯತ್ಯಾಸ ತಿಳಿಯುವಲ್ಲಿ ತೊಂದರೆ. (ಚ ಅಂದರೆ ಶ, ಕೋಟು ಎಂದರೆ ಬೋಟು ಎಂದು ಮಗುವು ಆ ಪದ ಅಥವಾ ಅಕ್ಷರವನ್ನು ಭಾವಿಸುತ್ತದೆ).
- ಶ್ರವಣ ನಿಗಾ (Auditory attention) ಎಂದರೆ ಮಗುವಿಗೆ ಒಂದು ಕೆಲಸವನ್ನು ಮುಗಿಸಲು ಮನಸ್ಸು ಅಥವಾ ನಿಗಾ ಇಡುವಲ್ಲಿ ತೊಂದರೆ. ತರಗತಿಯಲ್ಲಿ ಸಾಕಷ್ಟು ಸಮಯ ಮನಸ್ಸಿಟ್ಟು ಕೇಳಿಸಿಕೊಳ್ಳಲು ಅಥವಾ ಕೊಟ್ಟ ಕೆಲಸ ಮಾಡಲು ಸಾಮರ್ಥ್ಯವಿರುವುದಿಲ್ಲ.
- ಶ್ರವಣೇಂದ್ರಿಯ ಸಂಲಗ್ನ (Auditory cohesion): ಸಂಭಾಷಣೆಗಳಿಂದ ನಿರ್ಣಯಕ್ಕೆ ಬರಲು ಇರುವ ಅಸಾಮರ್ಥ್ಯ, ಒಗಟುಗಳನ್ನು ಅರ್ಥ ಮಾಡಿಕೊಳ್ಳುವುದು ಅಥವಾ ಮೌಖಿಕವಾಗಿ ಗಣಿತದ ಸಮಸ್ಯೆಗಳನ್ನು ಗ್ರಹಿಸುವುದು, ಇವೆಲ್ಲಕ್ಕೂ ಶ್ರವಣೇಂದ್ರಿಯ ಸಂಸ್ಕರಣ ಮತ್ತು ಭಾಷಾ ಕೌಶಲ ಅಗತ್ಯ.

ಮಗುವಿಗೆ ನೆರವು

- ಸಾಧ್ಯವಾದಾಗಲೆಲ್ಲಾ ಹಿನ್ನೆಲೆ ಶಬ್ದವನ್ನು ಕಡಿಮೆ ಮಾಡುವುದು ಮತ್ತು ನೀವು ಮಾತನಾಡುವಾಗ ಮಗು ನಿಮ್ಮನ್ನು ನೋಡುವಂತೆ ಮಾಡುವುದು.
- ಸರಳವಾದ ಅರ್ಥಮಾಡಿಕೊಳ್ಳಲು ಸಾಧ್ಯವಾಗುವ ವಾಕ್ಯಗಳನ್ನು ಬಳಸುವುದು ಮತ್ತು ನಿಧಾನವಾಗಿ ಅಥವಾ ಮೆಲ್ಲನೆ ಮೃದುವಾಗಿ ಮಾತನಾಡುವುದು.
- ಸೂಚನೆಗಳನ್ನು ಮತ್ತೆ ಪುನರುಚ್ಚರಿಸಲು ಮಗುವಿಗೆ ಹೇಳುವುದು. ಅವುಗಳನ್ನು ಕೊಟ್ಟ ಕೆಲಸ ಮುಗಿಯುವವರೆಗೆ ಮತ್ತೆಮತ್ತೆ ಜೋರಾಗಿ ಹೇಳಲು ಸೂಚಿಸುವುದು (ಮಗುವು ನಿಮಗೆ ಹೇಳುವುದು ಅಥವಾ ತನಗೆ ತಾನೇ ಹೇಳಿಕೊಳ್ಳುವುದು).
- ಕೊಟ್ಟ ಸೂಚನೆಗಳನ್ನು ಪಾಲಿಸಲು ಟಿಪ್ಪಣಿಗಳನ್ನು ಬರೆಯುವುದು, ನಿಗದಿತ ಸಮಯದ ಬಗ್ಗೆ ಎಚ್ಚರಿಸಲು ಕೈ ಗಡಿಯಾರವನ್ನು ಧರಿಸುವುದು, ಕ್ರಮಬದ್ಧವಾದ ದಿನಚರಿ ಇಟ್ಟುಕೊಳ್ಳಲು ನೆರವಾಗುವುದು.
- ಕೇಳಿಸಿಕೊಳ್ಳಲೇಬೇಕಾದ ಸಂದರ್ಭದಲ್ಲಿ ಮಗುವನ್ನು ಶಬ್ದವಿಲ್ಲದ ಸ್ಥಳಕ್ಕೆ ಕಳುಹಿಸುವುದು. ಮನೆಯಲ್ಲಿ ಓದಲು ಶಾಂತವಾದ ಸ್ಥಳವಿರುವಂತೆ ನೋಡಿಕೊಳ್ಳುವುದು. ಶಾಲೆಯಲ್ಲಿ ಮುಂದಿನ ಸಾಲಿನಲ್ಲಿ ಅಥವಾ ಹಿಂಬದಿಗೆ ಕಿಟಕಿಯಿರುವ ಕಡೆಕೂರಿಸುವುದು.
- ಶ್ರವಣೇಂದ್ರಿಯ ಸಂಸ್ಕರಣಾ ದೋಷವುಳ್ಳ ಮಕ್ಕಳ ಕಲಿಕೆಗೆ ನೆರವು ನೀಡಲು ವಿಶೇಷವಾಗಿ ವಿನ್ಯಾಸಗೊಳಿಸಿರುವ ಟೇಪ್ ರೆಕಾರ್ಡರ್‌ಗಳು, ಆನ್‌ಲೈನ್ ಟಿಪ್ಪಣಿಗಳಂತಹ ಪಠ್ಯ ಸಾಧನಗಳನ್ನು ಬಳಸುವುದು.
- ಕೊಠಡಿ ಮತ್ತು ಡೆಸ್ಕನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುವಂತಹ ಮತ್ತು ನಿಯಮಿತವಾದ, ಕಾರ್ಯಸಾಧ್ಯವಾಗುವಂತಹ ಕೆಲಸಗಳನ್ನು ಕೊಡುವುದು.

ಸಂಖ್ಯಾದೋಷ (Dyscalculia)

ಡಿಸ್ಕಾಲ್ಕುಲಿಯಾ ಎಂಬುವುದು ಒಂದು ನಿರ್ದಿಷ್ಟ ಕಲಿಕಾ ಅಸಾಮರ್ಥ್ಯವಾಗಿದೆ. ಸಂಖ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಗಣಿತದ ನಿಯಮಗಳನ್ನು ಕಲಿಯಲು ವ್ಯಕ್ತಿಯಲ್ಲಿರುವ ಅಸಾಮರ್ಥ್ಯವಾಗಿದೆ. ಈ ರೀತಿಯ ನಿರ್ದಿಷ್ಟ ಕಲಿಕಾ ತೊಂದರೆ ಹೊಂದಿರುವ ವ್ಯಕ್ತಿಗಳು ಚಿಹ್ನೆಗಳನ್ನು ಗ್ರಹಿಸುವುದರಲ್ಲಿ ಹಿಂದಿರುತ್ತಾರೆ. ಬಾಯಿಪಾಠ ಮಾಡುವುದು ಮತ್ತು ಸಂಖ್ಯೆಗಳನ್ನು ಆಯೋಜಿಸುವುದು ಅವರಿಗೆ ಕಷ್ಟವಾಗುತ್ತದೆ. ಅವರು ಸಮಯ ಎಷ್ಟೆಂದು ಹೇಳಲು ಅಥವಾ ಎಣಿಸಲು ಕಷ್ಟಪಡುತ್ತಾರೆ.

ಡಿಸ್ಕಾಲ್ಕುಲಿಯಾದ ವಿಧಗಳು

- ಮೌಖಿಕ ಡಿಸ್ಕಾಲ್ಕುಲಿಯಾದಲ್ಲಿ ಮಗುವಿಗೆ ಸಂಖ್ಯೆಗಳನ್ನು ಓದಲು ಅಥವಾ ಬರೆಯಲು ಬರುತ್ತದೆ. ಆದರೆ ಅದೇ ಸಂಖ್ಯೆಗಳನ್ನು ಮಾತಿನಲ್ಲಿ ಹೇಳಿದಾಗ ಅವುಗಳನ್ನು ಅರ್ಥ–ಮಾಡಿಕೊಳ್ಳಲು / ಗುರುತಿಸಲು ಕಷ್ಟವಾಗುತ್ತದೆ.
- ಪ್ರಾಕ್ಟೊಗ್ನೋಸ್ಟಿಕ್ ಡಿಸ್ಕಾಲ್ಕುಲಿಯಾ: ಮಗುವಿಗೆ ಗಣಿತದ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತದೆ.

ಉದಾ, ಎರಡು ವಸ್ತುಗಳನ್ನು ಹೋಲಿಸಿ ನೋಡುವುದು (ದೊಡ್ಡದು, ಚಿಕ್ಕದು).

- ಲೆಕ್ಸಿಕಲ್ ಡಿಸ್ಕಾಲ್ಕುಲಿಯಾದಲ್ಲಿ ಮಗುವು ಅಂಕಿಗಳನ್ನು ಮತ್ತು ಗಣಿತ ಚಿಹ್ನೆಗಳನ್ನು (+,–ಸೇರಿದಂತೆ) ಓದಲು ಕಷ್ಟಪಡುವುದು.
- ಗ್ರಾಫಿಕಲ್ ಡಿಸ್ಕಾಲ್ಕುಲಿಯಾ ಅಥವಾ ಚಿತ್ರಾತ್ಮಕ ದೋಷ: ಮಗುವು ಪರಿಕಲ್ಪನೆಗಳನ್ನು ಸರಿಯಾಗಿ ಅರ್ಥ–ಮಾಡಿಕೊಂಡರೂ ಓದಲು, ಬರೆಯಲು ಮತ್ತು ಸರಿಯಾದ ಚಿಹ್ನೆಗಳನ್ನು ಬಳಸಲು ಮಗುವು ಕಷ್ಟಪಡುವುದು.
- ಐಡಿಯಾಗ್ನೋಸ್ಟಿಕಲ್ ಡಿಸ್ಕಾಲ್ಕುಲಿಯಾ: ಮಗುವು ಗಣಿತದ ಚಿಹ್ನೆಗಳನ್ನು ಮತ್ತು ಅವುಗಳ ಸಂಬಂಧಗಳನ್ನು ಅರಿತು ಹೊಂದಿಸುವಲ್ಲಿ ಅಥವಾ ಜೋಡಿಸುವಲ್ಲಿ ಕಷ್ಟಪಡುವುದು.

ಆಪರೇಷನಲ್ ಡಿಸ್ಕಾಲ್ಕುಲಿಯಾ: ಅಂಕಗಣಿತದ ಲೆಕ್ಕಗಳನ್ನು ಮಾಡುವುದರಲ್ಲಿ ಮಗುವಿಗೆ ಕಷ್ಟವಾಗುವುದು.

ಮಗುವಿಗೆ ನೆರವು

- ಅಡುಗೆ ಮಾಡುವುದು: ಪೋಷಕರು ಮತ್ತು ಮಗು ಒಟ್ಟಿಗೆ ಸೇರಿ ಅಡುಗೆ ಮಾಡಲು ಒಂದು ತಿನಿಸನ್ನು ಆಯ್ಕೆ ಮಾಡುವುದು. ಅದಕ್ಕೆ ಬೇಕಾಗುವ ಪದಾರ್ಥಗಳನ್ನು ಪಟ್ಟಿ ಮಾಡಿ ಅದನ್ನು ಒದಗಿಸುವ ಜವಾಬ್ದಾರಿಯನ್ನು ಮಗುವಿಗೆ ನೀಡುವುದು. ಉದಾಹರಣೆಗೆ, 1 ಕೆಜಿ ಹೂಕೋಸು, 3 ಕ್ಯಾರೆಟ್, 2 ಈರುಳ್ಳಿ, 6 ತುಂಡು ದೊಣ್ಣೆ ಮೆಣಸಿನಕಾಯಿ ಅಥವಾ ತರಕಾರಿಗಳನ್ನು 5 ಭಾಗಗಳಾಗಿ ಕತ್ತರಿಸುವಂತೆ ಹೇಳುವುದು.
- ಗಡಿಯಾರದೊಂದಿಗೆ ಆಟವಾಡುವುದು: ಒಂದು ನಿರ್ದಿಷ್ಟ ಸಮಯವಾದಾಗ ಬಂದು ಹೇಳಬೇಕೆಂಬ ಕೆಲಸವನ್ನು ಮಗುವಿಗೆ ಕೊಡುವುದು. ನಂತರ ಅದನ್ನು ಎಷ್ಟು ಜವಾಬ್ದಾರಿಯಿಂದ ನಿರ್ವಹಿಸಿರುವೆ ಎಂದು ಹೇಳುತ್ತಾ ನೀನೀಗ ದೊಡ್ಡವನಾಗಿದ್ದೀಯ / ದೊಡ್ಡವಳಾಗಿದ್ದೀಯ ಎಂದು ಹೊಗಳುವುದು.
- ಅಂಗಡಿಗೆ ಹೋಗುವುದು ಅಥವಾ ಶಾಪಿಂಗ್ ಮಾಡುವುದು: ಮಗು ತಾನೇ ಖುದ್ದಾಗಿ ಅಂಗಡಿಗೆ ಹೋಗಿ ವಸ್ತುಗಳನ್ನು ಖರೀದಿಸಿ ತರುವ ಜವಾಬ್ದಾರಿಯನ್ನು ನೀಡುವುದು. ಪರ್ಸಿನಲ್ಲಿರುವ ಹಣವನ್ನು ಎಣಿಸಿದಾಗ ಮಗುವಿಗೆ ಸ್ವಲ್ಪಮಟ್ಟಿಗೆ ಸಂಖ್ಯೆಗಳ ಪರಿಕಲ್ಪನೆಗಳು ಬರಲು ಸಹಾಯವಾಗುವುದು.
- ಎಣಿಸುವುದು: ರಸ್ತೆಯಲ್ಲಿ ಕಾಣುವ ಕಾರುಗಳನ್ನು ಎಣಿಸುವುದು, ರಸ್ತೆಯಲ್ಲಿ ಹೋಗುವ ಜನರನ್ನು ಎಣಿಸುವುದು, ಬಿಳಿ ಶೂ ಧರಿಸಿದವರನ್ನು ಎಣಿಸುವುದು. ಮೆಟ್ಟಿಲು ಹತ್ತುವಾಗ ಮೆಟ್ಟಿಲುಗಳ ಸಂಖ್ಯೆಯನ್ನು ಎಣಿಸುವುದು.
- ಟೆಲಿಫೋನ್ ನಂಬರನ್ನು ನೆನಪಿಟ್ಟುಕೊಳ್ಳುವುದು: ತನ್ನ ಅಜ್ಜಿಯ ಫೋನಿನ ಮೊದಲ ಮೂರು ಅಂಕಿಗಳನ್ನು ಮಗು ಮತ್ತು ಮಿಕ್ಕದ್ದನ್ನು ದೊಡ್ಡವರು ನೆನಪಿನಲ್ಲಿಟ್ಟು–ಕೊಳ್ಳುವುದು. ನಂತರ ಇಬ್ಬರೂ ಒಟ್ಟಿಗೆ ಸೇರಿ ಅಜ್ಜಿಗೆ ಫೋನ್ ಮಾಡಿ ವಿಚಾರಿಸುವುದು. ಇದನ್ನು ಚೆನ್ನಾಗಿ ಮಾಡಿದರೆ ಸಂಭ್ರಮಿಸುವುದು.
- ಅಂಗಡಿಗಳು: ಮಗುವು ಅಂಗಡಿಯಲ್ಲಿ ಅಥವಾ ಶಾಲೆಯಲ್ಲಿ ಅಂಗಡಿ ನಡೆಸುವುದು. ಅಲ್ಲಿ ಮನೆಯ ಅಥವಾ ಶಾಲೆಯ ಕೆಲವು ವಸ್ತುಗಳನ್ನು ಮಾರಾಟಕ್ಕಿಡುವುದು. ಪ್ರತಿಯೊಂದಕ್ಕೂ 'ದರಪಟ್ಟಿ' ಅಂಟಿಸುವುದು. ಶಾಲೆಯಲ್ಲಿ ಶಿಕ್ಷಕರು ಮತ್ತು ಶಾಲಾ ಗೆಳೆಯರು, ಹಾಗೆಯೇ ಮನೆಯಲ್ಲಿ ಪೋಷಕರು ಮತ್ತು ಇತರ ಕುಟುಂಬದ ಸದಸ್ಯರು ಗ್ರಾಹಕರಾಗುವುದು. ಈ ಆಟದ ಮೂಲಕ ಪ್ರಮಾಣ, ಕೂಡುವ ಮತ್ತು ಕಳೆಯುವ ಲೆಕ್ಕ ಮತ್ತು ಹಣವನ್ನು ನಿಭಾಯಿಸುವುದನ್ನು ಮಗು ಕಲಿಯುತ್ತದೆ. ಇದು ಗಣಿತವನ್ನು ಕಲಿಯಲು ಉತ್ತಮ ಅಭ್ಯಾಸವಾಗುತ್ತದೆ.

ಬರಹ ದೋಷ (Dysgraphia)

ಡಿಸ್‌ಗ್ರಾಫಿಯಾ ಎನ್ನುವುದು ಒಬ್ಬ ವ್ಯಕ್ತಿಯ ಕೈಬರಹ ಸಾಮರ್ಥ್ಯ ಮತ್ತು ಸೂಕ್ಷ್ಮ ಚಲನಾ ಕೌಶಲದ ಒಂದು ಕಲಿಕಾ ಅಸಾಮರ್ಥ್ಯ–ವಾಗಿದೆ. ಅಸ್ಪಷ್ಟವಾಗಿ ಬರೆಯುವುದು, ಪದಗಳ ಮಧ್ಯೆ ಸಮವಾಗಿ ಅಂತರವಿಲ್ಲದಿರುವುದು. ಪುಸ್ತಕದಲ್ಲಿ ಬರೆಯುವಾಗ ಸರಿಯಾಗಿ ಸ್ಥಳ ಬಿಡದಿರುವುದು. ಪದಗಳ ಮಧ್ಯೆ ಸರಿಯಾಗಿ ಅಂತರವಿಲ್ಲದೆ ಬರಹ ಅಸ್ತವ್ಯಸ್ತವಾಗಿರುವುದು. ವಿಪರೀತವಾಗಿ ಕಾಗುಣಿತ ದೋಷಗಳು, ಬರಹದ ರಚನೆಯಲ್ಲಿ ತೊಂದರೆ ಮತ್ತು ಏಕಕಾಲದಲ್ಲಿ ಯೋಚಿಸಿ ಬರೆಯಲು ಕಷ್ಟವಾಗುವುದು, ಇತ್ಯಾದಿ ದೋಷಗಳು ಕಂಡು–ಬರುತ್ತವೆ.

ಗುಣಲಕ್ಷಣಗಳು

- ಅಕ್ಷರಗಳ ಗಾತ್ರ ಮತ್ತು ಆಕಾರ ಸಮನಾಗಿ ಇಲ್ಲದಿರುವುದು, ಅಕ್ಷರಗಳನ್ನು ಪೂರ್ತಿಮಾಡದಿರುವುದು, ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ ದೊಡ್ಡ ಅಕ್ಷರ ಮತ್ತು ಚಿಕ್ಕ ಅಕ್ಷರಗಳೆರಡನ್ನೂ ಒಟ್ಟೊಟ್ಟಾಗಿ ಬರೆಯುವುದು. ಕೈಹಿಡಿತ ಸರಿಯಾಗಿರದ ಕಾರಣ ಅಕ್ಷರಗಳು ಸೊಟ್ಟಗಾಗಿರುವುದು.
- ಬರೆಯುವ ಕೆಲಸವನ್ನು ಪೂರ್ತಿ ಮಾಡಲು ನಿರಾಕರಿಸುವುದು ಅಥವಾ ಹಿಂಜರಿಕೆ. ನಿಧಾನವಾಗಿ ಬರೆಯುವುದರಿಂದ ಅಥವಾ ಬರೆಯಲು ಸಾಧ್ಯವಾಗದೆ ನಿರಾಶೆಯಿಂದ ಅಳುವುದು ಮತ್ತು ಮಾನಸಿಕ ಒತ್ತಡ ಉಂಟಾಗುವುದು. ಬರೆಯುವಾಗ ತನ್ನಷ್ಟಕ್ಕೆ ತಾನು ಮಾತನಾಡುವುದು.

ಡಿಸ್‌ಗ್ರಾಫಿಯಾದ ವಿಧಗಳು

ಡಿಸ್ಲೆಕ್ಸಿಕ್ ಡಿಸ್‌ಗ್ರಾಫಿಯಾ ಎಂಬ ದೋಷದಲ್ಲಿ ಮಗುವು ತಾನೇ ಆಲೋಚಿಸಿ ಬರೆಯುವ ಬರಹವು ಅಸ್ಪಷ್ಟವಾಗಿರುವುದು ಅಥವಾ ಗಜಿಬಿಜಿಯಾಗಿ ಕಾಣುವುದು. ಆದರೆ ನಕಲು ಮಾಡಿದ ಬರಹ ಚೆನ್ನಾಗಿರುತ್ತದೆ. ಅಲ್ಲೂ ಕಾಗುಣಿತ ಸರಿಯಾಗಿರುವುದಿಲ್ಲ.

- ಮೋಟಾರು ಡಿಸ್‌ಗ್ರಾಫಿಯಾ ದೋಷವು ಸೂಕ್ಷ್ಮಚಲನಾ ಕೌಶಲ ದೋಷದಿಂದ (Fine motor Skills) ಉಂಟಾಗುವುದು. ಮಗುವಿನ ಕೈ ಚಲನಾ ಸಾಮರ್ಥ್ಯದಲ್ಲಿ ಕುಂದು ಕಾಣುವುದು. ಹಾಗೆಯೇ ಸ್ನಾಯು ಚಲನೆಯಲ್ಲಿ ದೋಷವಿರುವುದು. ಇದರೊಂದಿಗೆ ಅನಿರ್ದಿಷ್ಟ ರೀತಿಯ ಚಲನಾ (ಮೋಟಾರ್) ಅಸಾಮರ್ಥ್ಯತೆ ಇರಬಹುದು ಅಥವಾ ಇಲ್ಲದಿರಬಹುದು. ಸಾಮಾನ್ಯವಾಗಿ ಮಗುವಿನ ಬರವಣಿಗೆ ಅಸ್ಪಷ್ಟವಾಗಿರುವುದು. ನೋಡಿಕೊಂಡು ನಕಲು ಮಾಡಲು ಮತ್ತು ಒಂದು ಚಿಕ್ಕ ಪ್ಯಾರಾ ಬರೆಯಲು ಬಹಳ ಶ್ರಮವಹಿಸಬೇಕಾಗುವುದು.
- ಸ್ಪೇಷಿಯಲ್ ಡಿಸ್‌ಗ್ರಾಫಿಯಾ: ಬರವಣಿಗೆಯ ವೇಳೆ ಪದಗಳ ನಡುವೆ ಜಾಗ ಬಿಡುವುದನ್ನು ಅರ್ಥೈಸುವಲ್ಲಿ ತೊಂದರೆ.ಹಾಳೆಯ ಗೆರೆಗಳ ಮೇಲೆ ಬರೆಯಲು ಮತ್ತು ಪದಗಳ ಮಧ್ಯೆ ಜಾಗ ಬಿಡಲು ಕಷ್ಟವಾಗುವುದು.
- ಫೋನಾಲಾಜಿಕಲ್ ಡಿಸ್‌ಗ್ರಾಫಿಯಾ: ಬರಹ ಮತ್ತು ಕಾಗುಣಿತಗಳಲ್ಲಿ ಅಡಚಣೆಗಳು ಕಾಣುವುದು. ಪರಿಚಯವಿಲ್ಲದ ಪದಗಳ ಕಾಗುಣಿತ, ಪದಗಳಲ್ಲದ ಸಂಕೇತಗಳನ್ನು ಬರೆಯುವುದರಲ್ಲಿ ಕಷ್ಟವಿರುವುದು. ಧ್ವನಿಗೆ ಹೊಂದದ

ಪದಗಳನ್ನು (ಅನಿಯಮಿತ) ಬರೆಯುವಾಗ ತೊಂದರೆಯಿರುವುದು.

- ಲೆಕ್ಸಿಕಲ್ ಡಿಸ್‌ಗ್ರಾಫಿಯಾ: ಮಗುವಿಗೆ ಕಾಗುಣಿತ ಬರುತ್ತದೆ. ಆದರೆ ಒಂದು ಪದದ ಧ್ವನಿ ಮತ್ತು ಅಕ್ಷರ ವಿನ್ಯಾಸಗಳ ನಡುವೆ ಹೊಂದಾಣಿಕೆಯಿಲ್ಲದಿದ್ದರೆ ಆ ಪದಗಳನ್ನು ತಪ್ಪಾಗಿ ಬರೆಯುತ್ತದೆ. ಉಚ್ಚರಿಸುವ ಅಕ್ಷರಗಳಂತೆ ಪದಗಳು ಇಲ್ಲದ ಭಾಷೆಗಳಲ್ಲಿ ಸಾಮಾನ್ಯವಾಗಿ ಈ ದೋಷವು ಹೆಚ್ಚು ಕಾಣುವುದು. ಉದಾಹರಣೆಗೆ, ಧ್ವನಿ ರೂಪದ ಭಾಷೆಯಾಗಿರುವ ಭಾರತೀಯ ಭಾಷೆಗಳಿಗಿಂತ ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಈ ದೋಷಕಾಣುವುದು. ಅಂದರೆ ಅಕ್ಷರಗಳ ಉಚ್ಚಾರ ಮತ್ತು ಪದಗಳು ಒಂದೇ ರೀತಿಯಾಗಿದ್ದರೆ ಮಗುವಿಗೆ ಬರೆಯವುದು ಸುಲಭವಾಗುವುದು.

ಒಬ್ಬ ವಿದ್ಯಾರ್ಥಿ ಹೀಗೆ ಹೇಳುತ್ತಾನೆ:
ಬರೆಯುವುದೆಂದರೆ ಖಂಡಿತವಾಗಿ ಎಲ್ಲಕ್ಕಿಂತ ಬಹಳ ಕಷ್ಟವಾದ ಕೆಲಸ. ಪೂರ್ಣ ವಿರಾಮಗಳು ಮತ್ತು ದೊಡ್ಡ ಅಕ್ಷರಗಳಂತಹ (ಇಂಗ್ಲಿಷಿನಲ್ಲಿ) ಅಗತ್ಯವಿರುವ ಎಲ್ಲವನ್ನೂ ನೆನಪಿಟ್ಟು–ಕೊಳ್ಳುವುದು ತುಂಬಾ ಕಷ್ಟ, ಕತೆಯ ಮೇಲೆ ಗಮನವಿದ್ದಾಗ ಪದಗಳನ್ನು ಹೇಗೆ ಉಚ್ಚರಿಸಬೇಕೆಂದು ಯೋಚಿಸುವುದು ನನಗೆ ಅಸಾಧ್ಯ. ಹಾಗೆಯೇ ನಾನು ಯಾವುದರ ಬಗ್ಗೆ ಬರೆಯುತ್ತಿದ್ದೇನೆ ಎಂದು ನೆನಪಿಟ್ಟುಕೊಳ್ಳುವುದು ತುಂಬಾ ಕಷ್ಟ... ಕೆಲವೇ ವಾಕ್ಯಗಳಲ್ಲಿ ಬರೆಯುವುದು ಸುಲಭ ಎಂದು ನಾನು ಭಾವಿಸುತ್ತೇನೆ. ಆಗ ನನ್ನ ಕೈಗೆ ಹೆಚ್ಚು ನೋವಾಗುವುದಿಲ್ಲ. ನನ್ನ ಹಿಂದಿನ ಶಾಲೆಯಲ್ಲಿ ಶಿಕ್ಷಕರು ನನ್ನನ್ನು ದೂರುತ್ತಿದ್ದರು. ಆದರೆ ನಾನು ಬಹಳ ಸಣ್ಣ ಕಥೆಗಳನ್ನು ಬರೆಯುತ್ತಾ ಹೋದೆ. ಅವರಿಗೆ ನನ್ನ ಕಷ್ಟ ಏನೆಂದು ಗೊತ್ತಿಲ್ಲ, ಬರೆಯಲು ಹೆಣಗಾಡುವುದು ಹೇಗೆ ಎಂದು ಅರ್ಥವಾಗುವುದಿಲ್ಲ. ನಾನು ಎಷ್ಟೇ ಕಷ್ಟ ಪಟ್ಟರೂ ಕಾಗದ ಜಾರುತ್ತದೆ. ಇಡಿ ಹಾಳೆ ಅವ್ಯವಸ್ಥೆ ಮತ್ತು ತಪ್ಪುಗಳಂದ ಕೂಡಿರುತ್ತದೆ ಏಕೆಂಬುದರ ಬಗ್ಗೆ ಅವರಿಗೆ ಅರ್ಥವಾಗುವುದೇ ಇಲ್ಲ. ನನ್ನ ಬರಹ ಯಾವಾಗಲೂ ಗೋಜಲಾಗಿರುತ್ತದೆ ಎನ್ನುತ್ತಾರೆ. ನಾನು ಎಷ್ಟು ಕಷ್ಟಪಟ್ಟು ಬರೆಯಲು ಪ್ರಯತ್ನಿಸುತ್ತೇನೆ ಎಂದು ಅವರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ನಾನು ಎಷ್ಟೇ ಎಚ್ಚರಿಕೆಯಿಂದ ಬರೆಯಲು ಪ್ರಯತ್ನಿಸಿದರೂ ನನ್ನ ಬರಹ ಇತರ ಮಕ್ಕಳಂತಿರುವುದಿಲ್ಲ. ಪದಗಳು ಹೇಗೆ ಕಾಣಬೇಕೆಂದು ನಾನು ಬಯಸುತ್ತೇನೋ ಆ ರೀತಿ ಬರುವುದೇ ಇಲ್ಲ.

ಈ ವಿದ್ಯಾರ್ಥಿ ಬಹಳ ಪ್ರತಿಭಾವಂತ. ಅವನು ಅತ್ಯಧಿಕ ಬುದ್ಧಿಮತ್ತೆ ಹೊಂದಿದ್ದಾನೆ. ಅವನ ಮೌಖಿಕ ಮತ್ತು ಓದುವ ಸಾಮರ್ಥ್ಯ ಅತ್ಯುತ್ತಮವಾಗಿದೆ.ಈತ ಬರೆಯಲು ಬಹಳ ಕಷ್ಟಪಡುತ್ತಾನಾದರೂ, ಅತ್ಯುತ್ತಮ ಕಂಪ್ಯೂಟರ್ ತಿಳಿವಳಿಕೆ ಹೊಂದಿದ್ದಾನೆ.

ಮಗುವಿಗೆ ನೆರವು

- ಅಕ್ಷರಗಳನ್ನು ಮುಟ್ಟಿನೋಡುವುದು: ಅಕ್ಷರಗಳನ್ನು ನೋಡುವುದರ ಬದಲು ಅದನ್ನು ಮುಟ್ಟಿ ಅದರ ಸ್ಪರ್ಶ ಭಾವ ಉಂಟಾಗಲು ಹೆಚ್ಚು ಗಮನಹರಿಸುವುದು. ಮಗುವಿನ ಬೆನ್ನಿನ ಮೇಲೆ ಅಥವಾ ಅಂಗೈಯಲ್ಲಿ ಅಕ್ಷರವನ್ನು ಒತ್ತಿ ಬರೆದು ಅಕ್ಷರ ಹೇಗಿದೆಯೆಂಬ ಅನುಭವ ಉಂಟುಮಾಡುವುದು ಮತ್ತು ಅದನ್ನು ಕಾಗದದ ಮೇಲೆ ಮಗುವಿಗೆ ಬರೆಯಲು ಆಗುತ್ತದೆಯೇ ಎಂದು ಪರೀಕ್ಷಿಸುವುದು.
- ದೊಡ್ಡದಾಗಿ ಬರೆಯುವುದು: ಅಕ್ಷರಗಳು ಹೇಗೆ ರೂಪುಗೊಳ್ಳುತ್ತವೆಂಬುದು ನೆನಪಿರದ ಕಾರಣ ಡಿಸ್–ಗ್ರಾಫಿಯಾ ಉಂಟಾಗುವುದು. ಬಹುವಿಧದ ಸಂವೇದನಾ ಸಾಮಗ್ರಿ (Multi-sensory Materials) ಬಳಸಿ ದೊಡ್ಡ ಅಕ್ಷರಗಳನ್ನು ರಚಿಸಿದರೆ ಮಗುವಿಗೆ ನೆರವಾಗುವುದು.
- ಜೇಡಿಮಣ್ಣನ್ನು ಬಳಸುವುದು: ಜೇಡಿಮಣ್ಣಿನಲ್ಲಿ ಸುರುಳಿಗಳನ್ನು ಮಾಡಿ ಅಕ್ಷರಗಳನ್ನು ರಚಿಸುವುದು. ಇದು ಕೈಬಲ ಮತ್ತು ಸೂಕ್ಷ್ಮ ಚಲನಾ (ಮೋಟಾರ್) ಕೌಶಲವನ್ನು (Fine motor skills) ಹೆಚ್ಚಿಸುವುದು. ಇದರ ಜೊತೆಗೆ ಆಕಾರಗಳು ನೆನಪಿನಲ್ಲಿ ಉಳಿಯುವುದು.
- ಒಂದು ಪದದ ಮೊದಲ ಅಕ್ಷರದಿಂದ ಪದಗಳನ್ನು ರಚಿಸುವುದು: ಉದಾಹರಣೆಗೆ, ಇಂಗ್ಲಿಷಿನ POWER ಎಂಬ ಪದವನ್ನು ತೆಗೆದುಕೊಳ್ಳೋಣ.

P (ಪಿ)–ಪ್ರಿಪೇರ್, ಎಲ್ಲಾ ಆಲೋಚನೆಗಳ ಪಟ್ಟಿ ಮಾಡುವುದು
O(ಒ)–ಆರ್ಗನೈಸ್, ಆಯೋಜಿಸುವುದು ಮತ್ತು ಜೋಡಿಸುವುದು
W(ಡಬ್ಲ್ಯು)–ರೈಟ್, ಕರಡನ್ನು ಬರೆಯವುದು
E(ಇ)–ಎಡಿಟ್, ದೋಷಗಳನ್ನು ಹುಡುಕುವುದು ಮತ್ತು ತಿದ್ದುಪಡಿ ಮಾಡುವುದು
R(ಆರ್)– ರಿವೈಸ್, ಅಂತಿಮ ಕರಡನ್ನು ಬರೆಯುವುದು.

ಹಿರಿಯ ಮಕ್ಕಳಲ್ಲಿ ಈ ಅಭ್ಯಾಸವು ಬಹಳ ಪರಿಣಾಮಕಾರಿ–ಯಾಗುವುದು ಮತ್ತು ಅವರು ಅದನ್ನು ಸುಲಭವಾಗಿ ಕಲಿಯುವರು. ಇದೇ ತಂತ್ರ ಬಳಸಿ ತರಗತಿಯ ಇತರ ವಿದ್ಯಾರ್ಥಿಗಳು ಕೂಡಾ ನೆರವಾಗುವುದು.

ಡಿಸ್ಲೆಕ್ಸಿಯಾ ಎಂಬುದು ಓದಲು ಮತ್ತು ಇದಕ್ಕೆ ಸಂಬಂಧಿಸಿ–ದಂತಹ ಭಾಷಾ ಸಂಸ್ಕರಣಾ ಕೌಶಲದ ಮೇಲೆ ಪರಿಣಾಮ ಬೀರುವ ಒಂದು ನಿರ್ದಿಷ್ಟ ಕಲಿಕಾ ದೋಷವಾಗಿದೆ. ಮಗುವಿಗೆ ಸಲೀಸಾಗಿ ಓದಲು ಕಷ್ಟವಾಗುವುದು. ಇದಲ್ಲದೆ ನಿಯಮ ವಿಘಟನೆ (ಡಿಕೋಡಿಂಗ್), ಗ್ರಹಿಕೆ ಅಥವಾ ಧಾರಣಶಕ್ತಿ, ವಿಷಯಗಳನ್ನು ನೆನಪಿಸಿಕೊಳ್ಳುವುದು ಅಥವಾ ಸ್ಮರಣೆ, ಬರಹ, ಕಾಗುಣಿತಗಳಲ್ಲಿ ಕಷ್ಟವಾಗುವುದು. ಕೆಲವೊಮ್ಮೆ ಮಾತನಾಡಲು ಕೂಡ ಮಗುವು ಕಷ್ಟಪಡುವುದು.ಈ ದೋಷವು ಬೇರೆಬೇರೆ ಪ್ರಮಾಣದಲ್ಲಿ ಮಕ್ಕಳಲ್ಲಿ ಕಾಣಿಸಿಕೊಳ್ಳಬಹುದು. ಜೊತೆಗೆ ಕೆಲವರಿಗೆ ಇದಕ್ಕೆ ಸಂಬಂಧಿಸಿದ ಇತರೆ ವೈಕಲ್ಯಗಳು (Co-morbidities) ಕಾಣಿಸಿಕೊಳ್ಳಬಹುದು.

ಗುಣಲಕ್ಷಣಗಳು

- ಮಗುವು ಬಹಳ ಬುದ್ಧಿಶಾಲಿಯಾಗಿ ಚುರುಕಾಗಿದ್ದು ತನ್ನ ವಿಚಾರವನ್ನು ಸ್ಪಷ್ಟವಾಗಿ ಹೇಳುವಂತೆ ಕಾಣಿಸಬಹುದು. ಆದರೆ ತರಗತಿಯಲ್ಲಿ ಓದಲು, ಬರೆಯಲು, ಪದಗಳನ್ನು ಉಚ್ಚರಿಸಲು ಅಥವಾ ಕಾಗುಣಿತಗಳಲ್ಲಿ ಅಸಾಮರ್ಥ್ಯತೆಯನ್ನು ಹೊಂದಿರುವುದು. ಹೀಗಾಗಿ ಆ ಮಕ್ಕಳನ್ನು ಸೋಮಾರಿ, ಅಸಡ್ಡೆ ತೋರಿಸುವ, ಕಷ್ಟಪಟ್ಟು ಓದದ ಮಗು ಎಂದು ಹೆಸರಿಸುವುದು ತೀರಾ ಸಾಮಾನ್ಯ.
- ಮಗುವು ಹೆಚ್ಚು ಬುದ್ಧಿಮತ್ತೆ (IQ) ಹೊಂದಿರುತ್ತದೆ. ಆದರೆ ಶಾಲೆಯಲ್ಲಿ ಪರೀಕ್ಷೆಗಳನ್ನು ಇಷ್ಟಪಡುವುದಿಲ್ಲ. ಕಲೆ, ನಾಟಕ, ಕ್ರೀಡೆ, ವಿನ್ಯಾಸ ರಚನೆ, ವ್ಯವಹಾರ ಮುಂತಾದ ವೈವಿಧ್ಯಮಯ

ಪ್ರತಿಭೆಗಳನ್ನು ಹೊಂದಿದ್ದರೂ ಮಗುವಿನಲ್ಲಿ ಆತ್ಮಾಭಿಮಾನ ಕಡಿಮೆಯಿರುವುದು ಅಥವಾ ಕೀಳರಿಮೆ ಕಂಡುಬರುವುದು.

- ಏಕಾಗ್ರತೆಯಲ್ಲಿ ಕುಂದು ಕಾಣುವುದು. ಅಂದರೆ ಒಂದು ವಿಷಯದಲ್ಲಿ ಗಮನವಿಡುವುದರಲ್ಲಿ ಕಷ್ಟವಿರುವುದು. ಮಗುವು ಅತಿ ಚುರುಕಾದ ವ್ಯಕ್ತಿಯಾಗಿ (Hyperactive) ಅಥವಾ ಕನಸುಗಾರನಾಗಿ ಕಾಣಬಹುದು.
- ಪ್ರದರ್ಶನಗಳು, ಪ್ರಯೋಗಗಳು, ಅವಲೋಕನ ಮತ್ತು ದೃಶ್ಯ ಸಾಧನಗಳು ಹಾಗೆಯೇ ಸ್ವಂತ ಅನುಭವ ಅಥವಾ ಅಭ್ಯಾಸದ ಮೂಲಕ ಮಗುವು ಚೆನ್ನಾಗಿ ಕಲಿಯುವುದು .
- ಆಕಾರದಲ್ಲಿ ಹೋಲುವ ಅಕ್ಷರಗಳ ವ್ಯತ್ಯಾಸಗಳನ್ನು ಗುರುತಿಸುವುದರಲ್ಲಿ ಗೊಂದಲವಿರುವುದು. ಉದಾಹರಣೆಗೆ, ಇಂಗ್ಲಿಷಿನ d, p, q, g ಎಂಬ ಅಕ್ಷರಗಳ ವ್ಯತ್ಯಾಸಗಳನ್ನು ಅರಿಯಲು ಕಷ್ಟವಾಗುವುದು. ಮಗುವಿಗೆ bird ಎಂಬ ಪದವು drib ಆಗಿ ಕಾಣಬಹುದು.
- ಪ್ರಮುಖವಾಗಿ ಇಂಗ್ಲಿಷಿನಲ್ಲಿ ಅಕ್ಷರಗಳು ಮತ್ತು ಅವುಗಳ ಉಚ್ಚಾರಣಾ ಶಬ್ದಗಳು ಸಂಬಂಧಿಸಿರದ ಕಾರಣ ಗಟ್ಟಿಯಾಗಿ ಓದಿದರೆ ಮಗುವಿಗೆ ತೀವ್ರ ಮಾನಸಿಕ ಒತ್ತಡ ಉಂಟಾಗುವುದು. ಹೀಗಾಗಿ ಒಂದೇ ಸಾಲನ್ನು ಅಥವಾ ಪ್ಯಾರಾವನ್ನು ಮತ್ತೆಮತ್ತೆ ಓದುವುದು ಕಂಡುಬರುವುದು.

ಡಿಸ್ಲೆಕ್ಸಿಯಾ ವಿಧಗಳು

ಧ್ವನಿ ಜ್ಞಾನ ದೋಷ: ಮಗುವಿಗೆ ಪದಗಳಲ್ಲಿರುವ ಧ್ವನಿ(ಶಬ್ದ)ಗಳನ್ನು ಬೇರ್ಪಡಿಸಲು ಮತ್ತು ಆ ಧ್ವನಿಗಳನ್ನು ಬರಹದ ಚಿಹ್ನೆಗಳೊಂದಿಗೆ ಹೊಂದಿಸಲು ಕಷ್ಟವಿರುವುದು. ಧ್ವನಿ ಸಂಸ್ಕರಣೆಯ ಸಮಸ್ಯೆಯಿಂದಾಗಿ ಪದಗಳ ವಿಘಟನೆ ಅಥವಾ ಡಿಕೋಡ್ ಮಾಡಲು ಕಷ್ಟವಾಗುವುದು.

- ಮೇಲ್ಮೈ ದೋಷ: ಮಗುವು ಹೊಸ ಪದಗಳನ್ನು ಉಚ್ಚರಿಸಬಹುದು, ಆದರೆ ಸಾಮಾನ್ಯ ಪದಗಳನ್ನು ನೋಡಿ ಗುರುತಿಸುವುದರಲ್ಲಿ ಕಷ್ಟಪಡುವುದು. ಕಾಗುಣಿತ ಬೇರೆಯಾಗಿ ಉಚ್ಚಾರಣೆ ಭಿನ್ನವಾದಾಗ ಕಷ್ಟವಾಗುವುದು. ಉದಾಹರಣೆಗೆ, ಇಂಗ್ಲಿಷಿನಲ್ಲಿ weight ಎಂಬ ಪದವನ್ನು ವೇಟ್ ಎಂದು ಉಚ್ಚರಿಸಲಾಗುವುದು. ಇಲ್ಲಿ g ಅಕ್ಷರವನ್ನು ಉಚ್ಚರಿಸುವುದಿಲ್ಲ. ಹಾಗೆಯೇ debt ಎಂಬ ಪದವನ್ನು ಡೆಟ್ ಎಂದು ಉಚ್ಚರಿಸಲಾಗುವುದು. ಇಲ್ಲಿ b ಅಕ್ಷರವನ್ನು ಉಚ್ಚರಿಸುವುದಿಲ್ಲ. ಇಂತಹ ಪದಗಳನ್ನು ಉಚ್ಚರಿಸಲು ಮಗುವಿಗೆ ಕಷ್ಟವಾಗುವುದು.
- ತ್ವರಿತ ಉಚ್ಚಾರಣಾ ದೋಷ: ಡಿಸ್ಲೆಕ್ಸಿಯಾ ಇರುವ ಅನೇಕ ಮಕ್ಕಳಿಗೆ ಅಕ್ಷರಗಳು, ಸಂಖ್ಯೆಗಳು ಮತ್ತು ಬಣ್ಣಗಳನ್ನು ನೋಡುತ್ತಾ ಹೆಸರುಗಳನ್ನು ವೇಗವಾಗಿ ಹೇಳಲು ತೊಂದರೆಯಾಗುವುದು.

ಮಗುವಿಗೆ ನೆರವು

- ಓದುವುದು: ಮಗುವಿನ ಮುಂದೆ ಏರುಧ್ವನಿಯಲ್ಲಿ ಓದುವುದು. ಮಗುವು ಏನು ಓದಲು ಇಷ್ಟಪಡುತ್ತದೆಯೋ ಅದನ್ನು ಓದಲು ಬಿಡುವುದು. ಒಂದು ಚಿಕ್ಕ ಪ್ಯಾರಾವನ್ನು ಹಲವು ಬಾರಿ ಓದಲು ಹೇಳುವುದು. ಇಂತಹ ಅಭ್ಯಾಸಗಳಿಗೆ ಪ್ರೋತ್ಸಾಹ ನೀಡುವುದು.
- ಶಬ್ದಭಂಡಾರ ಹೆಚ್ಚಿಸುವುದು: ತಾನು ಪ್ರತಿದಿನ ಕಲಿತ ಹೊಸ ಪದವನ್ನು ಪೋಷಕರಿಗೆ ಅಥವಾ ಶಿಕ್ಷಕರಿಗೆ ಹೇಳಬೇಕೆಂದು ಮಗುವಿಗೆ ಸೂಚಿಸುವುದು. ಆ ಪದದ ಅರ್ಥದ ಬಗ್ಗೆ ಮಾತನಾಡುವುದು. ಅದನ್ನು ಶಬ್ದಕೋಶದಲ್ಲಿ ಹುಡುಕುವುದು. ಆ ಪದವನ್ನು ಬಳಸಿ ವಾಕ್ಯಗಳನ್ನು ರಚಿಸುವಂತೆ ಮಾಡುವುದು.
- ಆಟಗಳು: ಒಂದು ಪದದಲ್ಲಿ ಎಷ್ಟು ಉಚ್ಚಾರ ಅಕ್ಷರಗಳು ಇವೆಯೆಂದು ತಿಳಿಯಲು ಚಪ್ಪಾಳೆ ತಟ್ಟಿ ಹೇಳಿಕೊಡುವುದು. ಒಂದು ಪದದ ಶಬ್ದಗಳನ್ನು ಬೇರೆ ಮಾಡುವುದು. ನಂತರ ಅವುಗಳನ್ನು ಒಟ್ಟಿಗೆ ಸೇರಿಸಿ ಹೇಳುವುದು. ಹಾಡುಗಳು, ಕವನಗಳು ಮತ್ತು ನರ್ಸರಿ ಪ್ರಾಸಪದಗಳ ಬಗ್ಗೆ ಗಮನಹರಿಸುವಂತೆ ಮಾಡುವುದು. ಇದನ್ನು ಇನ್ನೂ ಚೆನ್ನಾಗಿ ಹೇಳಿಕೊಡಲು ಆಪ್ಸ್ (Apps), ಕಲಿಕಾ ಆಟಗಳ ವೆಬ್‌ಸೈಟ್‌ಗಳು ಮತ್ತು ಡಿಜಿಟಲ್ ಕಲಿಕಾ ಆಟಗಳ ಕಂಪ್ಯೂಟರ್ ಸಂಪನ್ಮೂಲಗಳನ್ನು ಬಳಸುವುದು.
- ಪಠ್ಯ ಅಭ್ಯಾಸದ ಮುಂಚಿನ ಕಲಿಕೆಗೆ ಅಥವಾ ಪೂರ್ವ ಬೋಧನೆಗೆ ಪ್ರೋತ್ಸಾಹ: ಪಠ್ಯಪುಸ್ತಕವನ್ನು ಓದುವ ಮೊದಲು ಎಲ್ಲವನ್ನೂ ಬದುಕಿನ ಅನುಭವಗಳಿಗೆ ಜೋಡಿಸುವುದು. ಕಣ್ಣಿಗೆ ಕಾಣುವ ವಸ್ತುಗಳು, ಆಟದ ವಸ್ತುಗಳು, ಸಾಮಾನ್ಯ ಮನೆ ಸಾಮಗ್ರಿಗಳು, ಕ್ಷೇತ್ರ ಪ್ರವಾಸಗಳ ಮೂಲಕ ವಿಷಯಗಳನ್ನು ಕಲಿಸುವುದು.

ಭಾಷಾ ಸಂಸ್ಕರಣಾ ದೋಷ

ಇದು ಒಂದು ನಿರ್ದಿಷ್ಟ ಪ್ರಕಾರದ ಶ್ರವಣೇಂದ್ರೀಯ ಪರಿಷ್ಕರಣಾ ದೋಷವಾಗಿದೆ (Auditory Processing Disorder- APD). ಇಲ್ಲಿ ಪದಗಳು, ವಾಕ್ಯಗಳು ಮತ್ತು ಕತೆಗಳಾಗಿ ರೂಪುಗೊಳ್ಳುವ ಧ್ವನಿಸಮೂಹಗಳಿಗೆ ಅರ್ಥವನ್ನು ಹೊಂದಿಸುವಲ್ಲಿ ಮಗುವಿಗೆ ಕಷ್ಟವಿರುವುದು. ಭಾಷಾ ಸಂಸ್ಕರಣಾ ದೋಷವು ಅಭಿವ್ಯಕ್ತಿಶೀಲ ಭಾಷೆಯ ಮೇಲೆ ಅಥವಾ ಸ್ವೀಕೃತ ಭಾಷೆಯ ಮೇಲೆ ಪ್ರಭಾವ ಬೀರುವುದು.

ಗುಣಲಕ್ಷಣಗಳು

- ಮಗುವು ಓದಿ ಗ್ರಹಿಸುವಲ್ಲಿ ಬಹಳ ಹಿಂದಿರುವುದು.
- ಮೌಖಿಕವಾಗಿ ತನ್ನ ಆಲೋಚನೆಗಳನ್ನು ವ್ಯಕ್ತಪಡಿಸುವುದರಲ್ಲಿ ಕಷ್ಟಪಡುವುದು.
- ವಸ್ತುಗಳನ್ನು ಗುರುತಿಸಿ ಹೆಸರಿಸಲು ಅಥವಾ ಹೆಸರಿಸಿರುವುದನ್ನು ಗುರುತಿಸಲು ಕಷ್ಟಪಡುವುದು.
- ಮಗುವು ತನಗೆ ಯಾವಾಗಲೂ ಹೇಳಲು ಸಾಕಷ್ಟಿದೆ, ಆದರೆ ಹೇಳಲಾಗುತ್ತಿಲ್ಲವೆಂಬ ನಿರಾಶೆಯನ್ನು ಹೊಂದಿರುವುದು.
- ಪದಗಳು ನಾಲಿಗೆ ತುದಿಯಲ್ಲಿವೆ, ಆದರೆ ಹೇಳಲು ಸಾಧ್ಯವಾಗುತ್ತಿಲ್ಲ ಎಂಬ ಭಾವನೆ ಹೊಂದಿರುವುದು.
- ಖಿನ್ನತೆಗೆ ಒಳಗಾಗಬಹುದು ಅಥವಾ ದುಃಖದ ಭಾವನೆಗಳನ್ನು ಹೊಂದಿರಬಹುದು.
- ಹಾಸ್ಯವನ್ನು ಅರ್ಥಮಾಡಿಕೊಳ್ಳಲು ಕಷ್ಟಪಡುವುದು.

ಭಾಷಾಭಿವ್ಯಕ್ತಿ ವೈಕಲ್ಯ (Expressive Language Disorder)

ವಯಸ್ಸಿಗೆ ತಕ್ಕಂತೆ ಮಗುವು ಶಬ್ದ ಭಂಡಾರವನ್ನು ಹೊಂದಿರುವುದಿಲ್ಲ ಆದ್ದರಿಂದ ಸರಿಯಾಗಿ ಹೆಸರಿಸಿ ವಸ್ತುಗಳನ್ನು ಕೇಳಲು ಕಷ್ಟಪಡುತ್ತದೆ. ವ್ಯಾಕರಣ ನಿಯಮಗಳನ್ನು ಅನುಸರಿಸಲು ಕೂಡ ಕಷ್ಟಪಡುತ್ತದೆ. ಇದರಿಂದಾಗಿ ಸಂಕೀರ್ಣ ವಾಕ್ಯ ಬಳಕೆಯಲ್ಲಿ ಅಸಾಮರ್ಥ್ಯತೆ ಉಂಟಾಗುವುದು.

ಸವಾಲುಗಳು

- ಗುರುತಿಸಲೆಂದು ಹೇಳುವ ಒಂದು ವಸ್ತುವಿಗೆ ಸಂಬಂಧಿಸಿದ ವಿವರಣಾತ್ಮಕ ಪದಗಳನ್ನು ಹೇಳಬಹುದು. ಆದರೆ ಆ ವಸ್ತುವನ್ನು ಹೆಸರಿಸಲು ಕಷ್ಟಪಡುವುದು.
- ಒಂದೇ ಅರ್ಥವಿರುವ ಪದಗಳನ್ನು ತಪ್ಪಾಗಿ ಬಳಸುವುದು. ಉದಾಹರಣೆಗೆ, 'ನನ್ನ ಕಾಲಿಗೆ ಸಾಕ್ಸ್ ಬೇಕು' ಎನ್ನುವ ಬದಲು' ನನ್ನ ಕಾಲಿನ ಮೇಲೆ ಸಾಕ್ಸ್ ಬೇಕು' ಎನ್ನುವುದು.
- ಸೃಜನಶೀಲವಾಗಿ ಅಥವಾ ಸರಳವಾಗಿ ಭಾಷೆಯನ್ನು ಬಳಸಲು ತೊಂದರೆ: ನೇರವಾಗಿ ವಿಷಯಕ್ಕೆ ಬರದೆ ಅದಕ್ಕೆ ಸುತ್ತುವರೆದಂತೆ ವಿವರಿಸಿ ಮಾತನಾಡುವುದು ಅಥವಾ ಒಂದೇ ವಿಷಯದ ಬಗ್ಗೆ ನಿರಂತರವಾಗಿ ಮಾತನಾಡುವುದು.
- ತಡವರಿಸಿ ಮಾತನಾಡುವುದು: ಮಾತನಾಡುವಾಗ 'ಆ' ಅಥವಾ 'ಅಂ' ಎಂಬ ಪದಗಳನ್ನು ಬಳಸಿ ತಡವರಿಸಿ ಮಾತನಾಡುವುದು.
- ಶಬ್ದಜಾಲ ಬಳಕೆ: ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಿಸಲು ಮಗುವಿಗೆ ಎರಡರಿಂದ ನಾಲ್ಕು ಸೆಕೆಂಡುಗಳು ಬೇಕಾಗುವುದು. ಇದನ್ನು ಪ್ರತಿಕ್ರಿಯೆ ಅವ್ಯಕ್ತ ಸಮಯ (Response latency time) ಎಂದು ಕರೆಯಲಾಗುವುದು. 'ಮರೆತಿದ್ದೇನೆ' ಅಥವಾ 'ಗೊತ್ತಿಲ್ಲ' ಎಂದು ಹೇಳಿ ವಾಕ್ಯ ರಚನೆಗೆ ಕಾಲಾವಕಾಶ ತೆಗೆದುಕೊಳ್ಳುವುದು.
- ತನ್ನಷ್ಟಕ್ಕೆ ತಾನೇ ಮಾತನಾಡುವುದು, ಮಾತಿನ ಅಭ್ಯಾಸ ಮಾಡುವುದು: ಅಲ್ಪಾವಧಿ ಸ್ಮರಣೆ ಶಕ್ತಿಯಿರುವುದರಿಂದ ಸರಿದೂಗಿಸಲು ವಿಷಯವನ್ನು ಪದೇಪದೇ ಹೇಳಿಕೊಳ್ಳುವುದು.
- ಕಲಿಕೆಯಲ್ಲಿ ಅಸಂಗತತೆ: ಮಗುವಿಗೆ ಒಂದು ಮಾಹಿತಿಯನ್ನು ಸ್ವೀಕರಿಸಿ ತಿಳಿಯಲು ಹಲವಾರು ವಿಧಗಳಲ್ಲಿ ಹೇಳಬೇಕಾದ ಅಗತ್ಯವಿರುತ್ತದೆ.
- ತಪ್ಪುಗಳನ್ನು ಗುರುತಿಸಬಹುದು ಆದರೆ ಸರಿಪಡಿಸಲಾಗುವುದಿಲ್ಲ: ಮಗುವಿಗೆ ತಪ್ಪಾಗಿದೆ ಎಂದು ಅರ್ಥಮಾಡಿಕೊಳ್ಳಲು ಸಾಧ್ಯ. ಆದರೆ ಅದನ್ನು ಹೇಗೆ ಸರಿಪಡಿಸುವುದೆಂದು ತಿಳಿಯುವುದಿಲ್ಲ.
- ವಾಕ್ಯಗಳನ್ನು ಅಥವಾ ವಿಚಾರಗಳನ್ನು ಪೂರ್ತಿ ಮಾಡಲಾಗುವುದಿಲ್ಲ: ಮಾತನಾಡುವಾಗ ವಿಷಯಗಳು ಒಂದಕ್ಕೊಂದು ಹೊಂದಿಕೊಳ್ಳದೆ ಪೂರ್ತಿಯಾಗದಿರು–ವುದರಿಂದ, ಸನ್ನಿವೇಶ ತಿಳಿಯದಿದ್ದರೆ ಮಗುವು ಏನು ಹೇಳುತ್ತಿದೆ ಎಂದು ಅರ್ಥಮಾಡಿಕೊಳ್ಳುವುದು ಕಷ್ಟವಾಗುವುದು.
- ಸಾಮಾಜಿಕ ಕೌಶಲಗಳ ಸಮಸ್ಯೆಗಳು ಮತ್ತು ತೊಂದರೆಯುಂಟು ಮಾಡುವ ನಡವಳಿಕೆ: ಇತರರು ಮಗುವನ್ನು ಅರ್ಥಮಾಡಿಕೊಳ್ಳಲಾಗದ ಕಾರಣ ಸಾಮಾಜಿಕ ಕೌಶಲಕ್ಕೆ ಸಂಬಂಧಿಸಿದ ಸಮಸ್ಯೆಗಳು ಎದುರಾಗುವುವು.
- ವಯಸ್ಸಿಗೆ ತಕ್ಕ ಬುದ್ಧಿಶಕ್ತಿಯಿದ್ದರೂ ಶೈಕ್ಷಣಿಕವಾಗಿ ಸಮಸ್ಯೆಗಳಿರುವುದು: ಶೈಕ್ಷಣಿಕ ಆಗ್ರಹಗಳು ಅಂದರೆ ಪಠ್ಯಕ್ರಮ ಹೆಚ್ಚಿದಂತೆ ಭಾಷಾ ಸಂಸ್ಕರಣೆಯ ಕೊರತೆಯಿಂದಾಗಿ ಕಲಿಕೆ ಮತ್ತು ಕಲಿಕಾ ಗತಿಯ ಮೇಲೆ ಪ್ರಭಾವ ಬೀರುವುದು.

ಮಗುವಿಗೆ ನೆರವು

- ವಿಷಯವನ್ನು ತಿಳಿಸಲು ನಿಧಾನವಾಗಿ ಮತ್ತು ಸ್ಪಷ್ಟವಾಗಿ ಮಾತನಾಡುವುದು, ಸರಳವಾಕ್ಯಗಳನ್ನು ಬಳಸುವುದು ಮತ್ತು ಬೋರ್ಡಿನ ಮೇಲೆ ಮುಖ್ಯಾಂಶಗಳನ್ನು ಬರೆಯುವುದು.
- ನೋಟ್ಸ್‌ಗಾಗಿ (ಟಿಪ್ಪಣಿ) ಟೇಪ್ ರೆಕಾರ್ಡರ್ ಬಳಸಲು ಅನುಮತಿಸುವುದು.
- ವೈಯಕ್ತಿಕವಾಗಿ ನೆರವು ನೀಡುವವರನ್ನು ಅಥವಾ ಸಹಪಾಠಿ ಬೋಧಕರನ್ನು ಒದಗಿಸುವುದು.
- ಆಲಿಸುವಿಕೆ ಸಾಮರ್ಥ್ಯ ಮತ್ತು ಗ್ರಹಿಕೆ ಶಕ್ತಿಯನ್ನು ಹೆಚ್ಚಿಸಲು ದೃಶ್ಯತಂತ್ರಗಳನ್ನು ಬಳಸುವುದು ಮತ್ತು ಟಿಪ್ಪಣಿ ಬರೆಯಲು ಚಿತ್ರ ನಕ್ಷೆ (ಗ್ರಾಫಿಕ್ ಆರ್ಗನೈಸರ್) ಬಳಸಲು ಅನುಮತಿಸುವುದು.
- ಸಣ್ಣ ಮಟ್ಟದಲ್ಲಿ ಸರಳ, ನೇರ ಮತ್ತು ವೈಯಕ್ತಿಕ ಸೂಚನೆಗಳನ್ನು ನೀಡುವುದು. ಸೂಚನೆ ನೀಡುವ ಮೊದಲು ಮಗುವಿನ ಗಮನ ಸೆಳೆಯುವುದು ಮತ್ತು ಎದುರಿಗೆ ಸ್ಪಷ್ಟವಾಗಿ ಮಾತನಾಡುವುದು.
- ವಿಷಯ ಸಂಸ್ಕರಣೆಗೆ ಮತ್ತು ಅರ್ಥಮಾಡಿಕೊಳ್ಳಲು ಹೆಚ್ಚು ಸಮಯವನ್ನು ನೀಡುವುದು.
- ಕೇಳಿಸಿಕೊಂಡಿರುವುದನ್ನು ಪುನಃ ಹೇಳಲು ಮಗುವಿಗೆ ಸೂಚಿಸುವುದು. ದೋಷಗಳನ್ನು ಗುರುತಿಸಲು ಮತ್ತು ಅವುಗಳನ್ನು ತಿದ್ದಲು ಮಗುವಿಗೆ ಸಹಾಯ ಮಾಡಲು ನೆರವು ನೀಡುವುದು.
- ಮಗುವಿಗೆ ಮಾಡಲು ಸಾಧ್ಯವಾದ ದಿನಚರಿಯನ್ನು ಮನೆಯಲ್ಲಿ ಮತ್ತು ಶಾಲೆಯಲ್ಲಿ ಮಾಡಿಸುವುದು.

'ಲರ್ನಿಂಗ್ ಆ್ಯಸ್ಪಿರೇಷನ್'ನ ಇತರ ಕಾರ್ಯವಿಧಾನಗಳು

ಸಾಮಾನ್ಯವಾಗಿ ನಮ್ಮ ಸಮಾಜದಲ್ಲಿ ಇಂತಹ ಯಾವುದೇ ಸವಾಲುಗಳನ್ನು ಎದುರಿಸಿದಾಗ ಮಗುವನ್ನು ಸೋಮಾರಿ, ಅಸಡ್ಡೆ ತೋರಿಸುವ ಮಗು ಎಂದು ಹೆಸರಿಲಾಗುತ್ತದೆ.ಆಗ ಮಗುವುದ ಇತರ ಕ್ಷೇತ್ರಗಳಲ್ಲಿ ಅತ್ಯುತ್ತಮವಾಗಿದ್ದರೂ ಕೀಳರಿಮೆ ಅಥವಾ ಆತ್ಮಾಭಿಮಾನ ಕೊರತೆಯಿಂದ ಕುಗ್ಗಬಹುದು.

'ಲರ್ನಿಂಗ್ ಆ್ಯಸ್ಪಿರೇಷನ್'ನಲ್ಲಿ ನಾವು ಮಕ್ಕಳಿಗೆ ಯಾವುದರಲ್ಲಿ ಆಸಕ್ತಿ ಇದೆಯೋ ಅದನ್ನು ಮಾಡಲು ಅವಕಾಶ ನೀಡುತ್ತೇವೆ. ನಮ್ಮ ಬೋಧನಾ ವಿಧಾನಗಳ ಭಾಗವಾಗಿ ಆಟ, ನೃತ್ಯ, ನಾಟಕ, ಕಲೆ ಅಥವಾ ಕಲಾ ವಸ್ತು ತಯಾರಿ ಇತ್ಯಾದಿಗಳನ್ನು ಮಾಡಿಸುತ್ತೇವೆ. ಉದಾಹರಣೆಗೆ, ಕರಕುಶಲ ಚಟುವಟಿಕೆಯ ಮೂಲಕ ಮಗುವಿಗೆ ಚಿಟ್ಟೆಯ ಜೀವನಚಕ್ರವನ್ನು ಕಲಿಸುತ್ತೇವೆ. ನಾಟಕದ ಮೂಲಕ ಮೊಘಲ್ ಇತಿಹಾಸವನ್ನು ಕಲಿಸುತ್ತೇವೆ. ಹಾಡುಗಳು ಮತ್ತು ಸಂಗೀತದ ಮೂಲಕ ವ್ಯಾಕರಣ ಕಲಿಸುತ್ತೇವೆ. ಗೊಂಬೆಯಾಟದ ಮೂಲಕ ಹಿಂದಿ ಕಥೆಗಳನ್ನು ಕಲಿಸುತ್ತೇವೆ. ನಮ್ಮಲ್ಲಿ ಬೋರ್ಡ್ ಆಟಗಳು ಮತ್ತು ಕಾರ್ಡ್ ಆಟಗಳು ಬಹಳ ಜನಪ್ರಿಯವಾಗಿದ್ದು, ಅವುಗಳನ್ನು ಯಶಸ್ವಿಯಾಗಿ ಬಳಸುತ್ತೇವೆ. ಸ್ವತಃ ಮಾಡುವ ಮೂಲಕ ಕಲಿಯುವುದು 'ಲರ್ನಿಂಗ್ ಆ್ಯಸ್ಪಿರೇಷನ್'ನ ಬೋಧನೆಯ ಮೂಲವಾಗಿದೆ.

ಇವು ಬಹುವಿಧದ ಕಲಾ ಪ್ರದರ್ಶನಗಳು, ಆಟಗಳು ಮತ್ತು ಕ್ರೀಡೆಗಳ ಮೂಲಕ ಮಗುವಿಗೆ ಕಲಿಸುವುದರಿಂದ ಆಗುವ ಕೆಲವು ಪ್ರಯೋಜನಗಳು. ಇಂತಹ ಕ್ರಿಯೆಗಳ ಮೂಲಕ ಆಗುವ ಪ್ರಯೋಜನಗಳ ಪಟ್ಟಿಗೆ ಕೊನೆಯಿಲ್ಲ. ಈ ರೀತಿಯಾಗಿ ಕಲಿಸಿ ನಾವು ನಮ್ಮ ವಿದ್ಯಾರ್ಥಿಗಳ ಪಠ್ಯ ಕಲಿಕೆಯಲ್ಲಿ ಅದ್ಭುತ ಬದಲಾವಣೆಗಳನ್ನು ಕಂಡಿದ್ದೇವೆ.

ನಿರ್ದಿಷ್ಟ ಕಲಿಕಾ ವೈಕಲ್ಯವುಳ್ಳ ಮಕ್ಕಳು ತಮ್ಮ ಜೀವನವನ್ನು ಅತ್ಯುತ್ತಮವಾಗಿ ನಡೆಸಬಲ್ಲರು ಎಂದು ನಾವು ನಂಬಿದ್ದೇವೆ. ಆದರೆ ಅವರಿಗೆ ತಮ್ಮ ವೈಕಲ್ಯಗಳನ್ನು ಮೆಟ್ಟಿ ನಿಲ್ಲಲು, ಅವರ ಬಲವರ್ಧನೆಗೆ ಸಕಾರಾತ್ಮಕವಾಗಿರುವ ಸೂಕ್ತ ಪರಿಸರವು ಬೇಕಷ್ಟೇ.



ಅರ್ಪಿತಾ ಯಾದವ್ ದೆಹಲಿಯಲ್ಲಿ ವಿಶೇಷ ಶಿಕ್ಷಣ (ಸ್ಪೆಷಲ್ ಎಜುಕೇಷನ್) ಅಧ್ಯಯನ ಮಾಡಿದ್ದಾರೆ. ಅವರು ವೈಕಲ್ಯವುಳ್ಳ ಓರ್ವ ಯುವಕನ ತಾಯಿ ಕೂಡ ಆಗಿದ್ದಾರೆ. ಪ್ರತಿಯೊಂದು ಮಗುವಿಗೆ ತನ್ನದೇ ಕಲಿಕಾ ಗತಿ ಹಾಗೂ ಸಾಮರ್ಥ್ಯದ ಮೂಲಕ ಕಲಿಯಲು ಸಹಜ ಹಾಗೂ ಸಮಗ್ರ ವಿಧಾನವಿದೆ ಎಂದು ಅವರು ನಂಬುತ್ತಾರೆ. ಅವರು ಮುಖ್ಯವಾಹಿನಿ ಶಾಲಾ ವ್ಯವಸ್ಥೆಗೆ ಹೊಂದದ ಕಲಿಕಾ ವೈಕಲ್ಯವುಳ್ಳ ಮಕ್ಕಳಿಗೆ ಸಮೃದ್ಧ ಸೂಕ್ತ ವಾತಾವರಣವನ್ನು ಒದಗಿಸುವ ಗುರಿಯನ್ನು ಹೊಂದಿರುವ 'ಲರ್ನಿಂಗ್ ಆ್ಯಸ್ಪಿರೇಷನ್' ಸಂಸ್ಥೆಯ ಶೈಕ್ಷಣಿಕ ನಿರ್ದೇಶಕಿ ಆಗಿದ್ದಾರೆ. ಅವರನ್ನು arpita34@gmail.com ರ'ಲ್ಲಿ ಸಂಪರ್ಕಿಸಬಹುದು.

ಅನುವಾದ: **ಹೇಮಾದೇವಿ ಬಿ ಎನ್** । ಪರಿಶೀಲನೆ: **ನಾಗಮಣಿ ಎಸ್ ಎನ್**